ತೆಗೆದುಕೊಳ್ಳುವುದಕ್ಕೆ ನಾನು ಹೇಳುತ್ತೇನೆ. ಅದರ ಬಗ್ಗೆ ಕಾರ್ಮಿಕ ಇಲಾಖೆ ಕ್ರಮ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು :— ನೀವು ಪತ್ರ ಬರೆಯಿರಿ.

ಶ್ರೀ ಆರ್.ವಿ. ದೇಶಪಾಂಡೆ :— ನನಗೆ ಪತ್ರ ಬರೆಯಿರಿ ಮತ್ತು ಕಾರ್ಮಿಕ ಇಲಾಖೆಯವರಿಗೂ ಪತ್ರ ಬರೆಯಿರಿ.

ಚಾಮರಾಜನಗರ ಜಿಲ್ಲೆಯಲ್ಲಿ ಜಲಸಂವರ್ಧನೆ ಯೋಜನೆಯಡಿ ಕೆರೆಗಳ ಹೂಳೆತ್ತುವುದು.

256(2833) ಶ್ರೀ ಗುರುಸ್ವಾಮಿ ಸಿ. (ಚಾಮರಾಜನಗರ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಜಲಸಂವರ್ಧನೆ ಯೋಜನೆಯಡಿ ಚಾಮರಾಜನಗರ ಜಿಲ್ಲೆಯಲ್ಲಿರುವ ಕೆರೆಗಳಲ್ಲಿನ ಹೂಳೆತ್ತುವ ಕೆಲಸವನ್ನು ಸರ್ಕಾರ ಕೈಗೆತ್ತಿಕೊಳ್ಳಲಾಗಿದೆಯೆ;

ಆ) ಹಾಗಿದ್ದಲ್ಲಿ ಕ್ಷೇತ್ರವಾರು ಮಾಹಿತಿ ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಇನ್ನೂ ನಿರ್ಧರಿಸಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಸಿ. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೇ, "ಜಲಸಂವರ್ಧನೆ ಯೋಜನೆಯಡಿ ಚಾಮರಾಜನಗರ ಜಿಲ್ಲೆಯಲ್ಲಿರುವ ಕೆರೆಗಳಲ್ಲಿನ ಹೂಳೆತ್ತುವ ಕೆಲಸವನ್ನು ಸರ್ಕಾರ ಕೈಗೆತ್ತಿಕೊಳ್ಳಲಾಗಿದೆಯೆ?" ಎಂದು ನನ್ನ ಪ್ರಶ್ನೆ ಇರುವಂಥಾದ್ದು. ಅದಕ್ಕೆ "ಇನ್ನೂ ನಿರ್ಧರಿಸಿರುವುದಿಲ್ಲ" ಎಂದು ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರದಿಂದ ನನಗೆ ಬಹಳ ನೋವಾಗಿದೆ. ಕಾರಣ ಏನೆಂದರೆ ಮಾನ್ಯ ಮುಖ್ಯಮಂತ್ರಿಗಳು ಎರಡು ವರ್ಷದ ಅವಧಿಯಲ್ಲಿ ಜನಹಿತ ಕಾರ್ಯಕ್ರಮಗಳನ್ನು ಏನು ಹಾಕಿಕೊಂಡಿದ್ದಾರೆ, ಅದರಲ್ಲಿ ನಾನು ಪ್ರಶಂಸೆ ಮಾಡಿರತಕ್ಕದ್ದು ಈ ಜಲಸಂವರ್ಧನೆ ಯೋಜನೆಯನ್ನು, ಇದು ನಿಜವಾಗಿಯೂ ಸ್ವಾಗತಾರ್ಹ ಮತ್ತು ಜನ ಮೆಚ್ಚತಕ್ಕಂಥ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ಮುಖ್ಯಮಂತ್ರಿಗಳು ಶೀಘ್ರಗತಿಯಲ್ಲಿ ಮೊದಲ ಆದ್ಯತೆಮೇಲೆ ತೆಗೆದುಕೊಳ್ಳತಕ್ಕದ್ದು ಬಹಳ ಮುಖ್ಯವಾಗಿರತಕ್ಕದ್ದು. ನಾನು ಉಪಪ್ರಶ್ನೆ ಕೇಳುವುದು ಏನೆಂದರೆ ಈಗ ಚಾಮರಾಜನಗರ ಜಿಲ್ಲೆ ಮಾತ್ರ ನಿರ್ಧಾರವಾಗಿಲ್ಲವೆಂದು ಹೇಳುತ್ತೀರೋ ಅಥವಾ ಇಡೀ ರಾಜ್ಯದಲ್ಲಿಯೇ

ಈ ಯೋಜನೆ ಎಲ್ಲಿಯೂ ನಿರ್ಧಾರವಾಗಿಲ್ಲವೇ ಎನ್ನತಕ್ಕದ್ದು ನನಗೆ ಬೇಕಾಗಿದೆ. ಮತ್ತೊಂದು ಪ್ರಶ್ನೆ ಏನೆಂದರೆ ಈಗ ಈ ಜಲಸಂವರ್ಧನೆ ಯೋಜನೆಯಲ್ಲಿ ತೆಗೆದುಕೊಳ್ಳತಕ್ಕಂಥ ಕಾರ್ಯಕ್ರಮವನ್ನು ಇಡೀ ರಾಜ್ಯದಲ್ಲಿ, ಒಂದೇಸಾರಿಗೆ ತೆಗೆದುಕೊಳ್ಳುತ್ತೀರೋ ಅಥವಾ ಹಂತಹಂತವಾಗಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಒಂದು ವ್ಯವಸ್ಥೆ ಏನಾದರೂ ಇದೆಯಾ? ಹಾಗಿದ್ದರೆ ಚಾಮರಾಜನಗರ ಜಿಲ್ಲೆಗೆ ಬರಬಂದು ಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ನಮ್ಮ ಈ ಜಿಲ್ಲೆಯಲ್ಲಿ ಹೆಚ್ಚಿನ ಕೆರೆಗಳನ್ನು ತೆಗೆದುಕೊಳ್ಳುವಂಥ ಕಾರ್ಯಕ್ರಮವನ್ನು ತಾವು ಮಾಡುತ್ತೀರಾ ಎನ್ನತಕ್ಕಂಥಾದ್ದಕ್ಕೆ ನನಗೆ ಉತ್ತರ ಬೇಕಾಗಿದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :— ಸನ್ಮಾನ್ಯ ಅಧ್ಯಕ್ಷರೇ, ಈ ಜಲಸಂವರ್ಧನೆ ಯೋಜನೆಯಡಿ ಬಹಳ ಉತ್ತಮವಾಗಿರತಕ್ಕಂಥ ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳು ಕೈಗೊಂಡಿದ್ದಾರೆ. ಆದರೆ ಇದರಲ್ಲಿ 20 ಪರ್ಸೆಂಟ್ ಸ್ಥಳೀಯ ಪ್ರಜೆಗಳಿಂದ ಸಂಗ್ರಹ ಮಾಡತಕ್ಕದ್ದು ಮತ್ತು 80 ಪರ್ಸೆಂಟ್ ಸರ್ಕಾರದಿಂದ ಅನುದಾನ ಕೊಡತಕ್ಕಂಥಾದ್ದು- ಈ ಒಂದು ವ್ಯವಸ್ಥೆಯನ್ನು ತಾವು ಮಾಡಿಕೊಂಡಿದ್ದೀರಿ. ಈಗ ಅಲ್ಲಿ ಬರೇ ಶ್ರಮದಾನ ಮೂಲಕ ಹೂಳೆತ್ತುವುದೇ ಆಗಲಿ, ಜಂಗಲ್ ಕಟಿಂಗ್ ಮಾಡುವುದಾಗಲೀ ಆಗುವುದಿಲ್ಲ. ಕೊನೆಪಕ್ಷ ತಾವು ಜೆ.ವಿ.ಸಿ. ಏರ್ಪಾಡು ಮಾಡಿದರೆ, ಅಲ್ಲಿ ರೈತರ ಟ್ರ್ಯಾಕ್ಟರ್‌ಗಳನ್ನು ಬಳಕೆ ಮಾಡಿಕೊಂಡರೆ ಅದು ಯೋಜನೆಗೆ ಪೂರಕವಾಗಿರುತ್ತದೆ ಎಂದು ನನ್ನ ವಿಚಾರ ಇದೆ.

ಶ್ರೀ ಜಿ. ರಾಜುಗೌಡ :— ರಾಜ್ಯದಲ್ಲಿ ಹೋಬಳಿಗೆ ಒಂದು ಕೆರೆ ಎಂದು ಸರ್ಕಾರ ತೀರ್ಮಾನಮಾಡಿದೆಯೆ? ಇದ್ದರೆ ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಇದಕ್ಕಾಗಿ ವಿಶ್ವಬ್ಯಾಂಕಿನಿಂದ ಬರತಕ್ಕಂಥ ಹಣ ಎಷ್ಟು?

ಶ್ರೀ ಎಸ್. ಕುಮಾರ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯಮಂತ್ರಿ) :— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಮಾನ್ಯ ಗುರುಸ್ವಾಮಿಯವರು ಕೇಳಿರತಕ್ಕಂಥ ಪ್ರಶ್ನೆಗೆ ಹೇಳುವುದೇನೆಂದರೆ ಈ ಜಲಸಂವರ್ಧನೆ ಯೋಜನೆಯಡಿಯಲ್ಲಿ ಕರ್ನಾಟಕದಲ್ಲಿ ಕಪ್ಪು ಮತ್ತು ಬೂದಿ ಬಣ್ಣದ ಏರಿಯಾ ಎಂದು ಪೂರ್ತಿಯಾಗಿ ಐಡೆಂಟಿಫೈ ಮಾಡಲಾಗಿದೆ. ಇದರಲ್ಲಿ ಮೊದಲನೇ ಹಂತದಲ್ಲಿ ಐದು ಸಾವಿರ ಕೆರೆಗಳನ್ನು ಹಂತಹಂತವಾಗಿ ತೆಗೆದುಕೊಳ್ಳುವಂಥ ನಿಟ್ಟಿನಲ್ಲಿ, ಈ ಜಲಸಂವರ್ಧನೆ ಯೋಜನೆಯಡಿಯಲ್ಲಿ ಹಣದ ಲಭ್ಯತೆ ಮೇರೆಗೆ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ವಿಶ್ವಬ್ಯಾಂಕಿನ ಯೋಜನೆಯಡಿಯಲ್ಲಿ ಈ ಕಾರ್ಯಕ್ರಮದ ಅಂತಿಮ ಹಂತದ ಹತ್ತಿರ ನಾವು ಇದ್ದೇವೆ. ಹಣಕಾಸಿನ ವ್ಯವಸ್ಥೆ ಆದ ತಕ್ಷಣ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ. ಮಾನ್ಯ ಕರಡಿಸಂಗಣ್ಣನವರು ಹೇಳಿರತಕ್ಕಂಥ ವಿಚಾರದಲ್ಲಿ ಸಹಭಾಗತ್ವ ಎಂದರೆ ರೈತರು ಒಂದು ಕಾಂಟ್ರಿಬ್ಯೂಷನ್ ಕೊಡಬೇಕು ಎನ್ನತಕ್ಕಂಥಾದ್ದು ವಾದ ಇದೆ. ಏಕೆಂದರೆ ಅದರಲ್ಲಿ ಶ್ರಮದಾನದ ರೂಪದಲ್ಲಿ ಇರಬಹುದು ಅಥವಾ ಹಣಕಾಸಿನ ರೂಪದಲ್ಲಿ ಆಗಿರಬಹುದು,

ಅದರಲ್ಲೂ ಹಣಕಾಸು ಇಷ್ಟು ಎಂದು ಇದ್ದರೆ ಉತ್ತಮ ಎನ್ನತಕ್ಕಂಥ ವಾದದ ಮೇಲೆ ಅದು ಇದೆ. ಹಿರಿಯರಾಗಿರತಕ್ಕಂಥ ಮಾನ್ಯ ರಾಜು ಗೌಡರು ಹೇಳಿರತಕ್ಕಂಥ ಪ್ರಶ್ನೆಗೆ, ಈಗಾಗಲೇ ಹೋಬಳಿಗೆ ಒಂದು ಕೆರೆ ಎಂದು ಹೇಳಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಇದಕ್ಕೆ ಯಾವುದೇ ತರಹ ವಿಶ್ವಬ್ಯಾಂಕಿನ ನೆರವು ಆಗಲಿ ಮತ್ತೊಂದು ಆಗಲಿ, ಅದಕ್ಕೆ ನಾವು ಕಾಯುವುದಿಲ್ಲ. ತಕ್ಷಣ ಹೋಬಳಿಗೆ ಒಂದು ಕೆರೆ ಎಂದು ಮಾಡಿ ಅದನ್ನು ಸಮಗ್ರವಾಗಿ ಅಭಿವೃದ್ಧಿ ಮಾಡತಕ್ಕಂಥಾದ್ದು, ಅದು ಕೋಡಿ ರಿಪೇರಿ ಇರಬಹುದು, ತೂಬು ಅಥವಾ ಏರಿ ರಿಪೇರಿ ಇರಬಹುದು, ಕ್ಯಾಚ್‌ಮೆಂಟ್ ಏರಿಯಾ ಮತ್ತು ಕಮಾಂಡ್ ಏರಿಯಾ ಮತ್ತು ವಾಟರ್‌ಶೆಡ್ ಏರಿಯಾ ಎಂದು ಈ ಮೂರು ಹಂತದಲ್ಲಿ ಎಲ್ಲವನ್ನೂ ಪೂರ್ತಿಯಾಗಿ ವೈಡ್ ಮಾಡಿ ಈ ಕಾರ್ಯಕ್ರಮವನ್ನು ಅದಷ್ಟು ಬೇಗ ಬರಗಾಲ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೂಡಲೇ ಇದನ್ನು ಶುರುಮಾಡುತ್ತಿದ್ದೇವೆ.

ಶ್ರೀ ಹೆಚ್.ಸಿ. ಬಸವರಾಜು :— ಸರ್ಕಾರದವರು ತೀರ್ಮಾನ ತೆಗೆದುಕೊಂಡು ಘೋಷಣೆ ಮಾಡಿ ಅದರ ಬಗ್ಗೆ ತಪಾಸಣೆ ಕೆಲಸವನ್ನು ಮಾಡಿದ್ದೀರಿ. ಇದನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಮತ್ತು ಯಾವಾಗ ಮುಗಿಸುತ್ತೀರಿ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಎಸ್. ಕುಮಾರ್ ಬಂಗಾರಪ್ಪ :— ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ರಾಜ್ಯದಲ್ಲಿ ಸುಮಾರು 747 ಹೋಬಳಿಗಳು ಎಂದು ನಾವು ಐಡೆಂಟಿಫೈ ಮಾಡಿದ್ದೇವೆ. ಅದರಲ್ಲಿ ಕೆಲವು ಹೋಬಳಿಗಳಲ್ಲಿ ಕೆರೆಗಳು ಇಲ್ಲದೇ ಇರತಕ್ಕಂಥಾದ್ದು ಎಂದರೆ, ದೊಡ್ಡ ಕೆರೆಗಳು ಇಲ್ಲದೇ ಇರತಕ್ಕಂಥಾದ್ದೂ ಇದೆ. ಈಗಾಗಲೇ ಸುಮಾರು 600 ರಿಂದ 650 ಕೆರೆಗಳನ್ನು ಶಾಸಕರುಗಳು ಕೊಟ್ಟಿರತಕ್ಕಂಥ, ಪತ್ರಗಳ ಮೇಲೆ ಅವರ ಆಯ್ಕೆ ಆಧಾರದ ಮೇಲೆ ಕೆರೆಗಳನ್ನು ಐಡೆಂಟಿಫೈ ಮಾಡಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಇನ್ನು ಒಂದು ವಾರ ಅಥವಾ ಹತ್ತು ದಿವಸದಲ್ಲಿ ಎಸ್ಟಿಮೇಟ್ ಎಲ್ಲಾ ಮಾಡಿಬಿಟ್ಟು ಕ್ಯಾಚ್‌ಮೆಂಟ್ ಏರಿಯಾಗೆ 15 ಪರ್ಸೆಂಟ್ 15 : 30 : 35 ಎಂದು ಈ ತರಹ ಎಲ್ಲಾ ಡಿವೈಡ್ ಮಾಡಿ ಪರ್ಸೆಂಟೇಜ್ ತರಹ ಮಾಡಿಬಿಟ್ಟು ಎಲ್ಲಾ ತಯಾರು ಮಾಡಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಕೆಲವು ಶಾಸಕರು ಇನ್ನೂ ಕೂಡ ಈ ಕೆರೆಗಳ ಮಾಹಿತಿಯನ್ನು ಕಳುಹಿಸದೆ ಇರತಕ್ಕಂಥ ಸಂದರ್ಭದಲ್ಲಿ ಇಂಜಿನಿಯರುಗಳ ಮುಖಾಂತರ ಅದನ್ನು ತೆಗೆದುಕೊಂಡು ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಇದ್ದೇವೆ. ಎಷ್ಟು ಬೇಗ ಸಾಧ್ಯವಾಗುತ್ತದೆಯೋ ಅಷ್ಟು ಬೇಗ ಇಂಜಿನಿಯರುಗಳ ಕಡೆಯಿಂದ ಕೆಲವು ವಿವರಗಳು ಬರುವುದಿದೆ, ಅದನ್ನು ಎಲ್ಲಾ ತೆಗೆದುಕೊಂಡು ತಕ್ಷಣ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು :— ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ. ತಾವು ಜಲಸಂವರ್ಧನೆ ಬಗ್ಗೆ ಹೆಚ್ಚಿಗೆ ಒತ್ತು ಕೊಟ್ಟು, ಕೆಲಸ ಮಾಡುತ್ತಿರುವುದು ಭಾರಿ ಸಂತೋಷ. ಸದಸ್ಯರ ಪರವಾಗಿ ತಮಗೆ ವಂದನೆಗಳು. ಎರಡನೆಯದಾಗಿ, ರಾಜ್ಯದಲ್ಲಿ ಒಟ್ಟು 148 ಮುನಿಸಿಪಾಲಿಟಿಗಳು ಇವೆ. ಈ ಮುನಿಸಿಪಾಲಿಟಿಗಳ ಸುತ್ತಮುತ್ತಲೂ ಕೆರೆಗಳು ಇವೆ. ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಮುನಿಸಿಪಾಲಿಟಿಗಳವರು ನೀರು ಸರಬರಾಜು ಮಾಡುವುದಕ್ಕೆ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ನಾನು ಮುಳಬಾಗಿಲು ಒಂದರ ಬಗ್ಗೆ ಮಾತ್ರ ಹೇಳುತ್ತಾ ಇಲ್ಲ. ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ 20-30 ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಈ ರೀತಿ ಬೋರ್‌ವೆಲ್‌ಗಳನ್ನು ಹಾಕಿರುವ ಕಡೆಗಳಲ್ಲಿ ಜಲಸಂವರ್ಧನೆ ಕಡೆಯಿಂದ ನೀವು ಹೂಳು ಎತ್ತಿಸಿದರೆ ಡಬಲ್ ಅಡ್ವಾನ್‌ಟೇಜ್ ಇದೆ. ಪಟ್ಟಣಗಳಿಗೆ ನೀರು ಸರಬರಾಜಿಗೂ ಅನುಕೂಲವಾಗುತ್ತದೆ. ಇತ್ತ ಕಡೆ ಹೂಳು ಎತ್ತುವುದಕ್ಕೂ ಅನುಕೂಲವಾಗುತ್ತದೆ. ಇದರ ಬಗ್ಗೆ ಸ್ವಲ್ಪ ತಾವು ಆಲೋಚನೆ ಮಾಡಿ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ತಾವು ಕೊಟ್ಟರತಕ್ಕ ಸಲಹೆ ಸೂಕ್ತವಾಗಿದೆ. ಈ ಜಲ ಸಂವರ್ಧನೆ ಯೋಜನೆಯ ಬಗ್ಗೆ ಸದನದ ಏಕಾಭಿಪ್ರಾಯವಿದೆಯೆಂದು ನಾನು ಭಾವನೆ ಮಾಡಿದ್ದೇನೆ. ಎಲ್ಲಿಯವರೆಗೆ ನಾವು ವೈಜ್ಞಾನಿಕವಾಗಿ ಈ ಭೂ ಜಲವನ್ನು ಮೇಲೆ ತರುವುದಕ್ಕೆ ಬುದ್ಧಿಪೂರ್ವಕ ಪ್ರಯತ್ನಗಳನ್ನು ಮಾಡುವುದಕ್ಕೆ ಎಲ್ಲಿಯವರೆಗೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಒಣಭೂಮಿ ಪ್ರದೇಶಗಳು ಏನಿವೆ ಅದಕ್ಕೆ ನಾವು ಯಾವ ಪ್ರಮಾಣದಲ್ಲೂ ಸ್ಪಂದಿಸುವುದಕ್ಕಾಗುವುದಿಲ್ಲ. ಆ ದಿಸೆಯಲ್ಲಿ ಇದೊಂದು ಮಹತ್ವಾಕಾಂಕ್ಷೆ ಇರತಕ್ಕಂಥ ಯೋಜನೆ. ಕಳೆದ ಒಂದೂವರೆ ವರ್ಷದಲ್ಲಿ ನಾವು ವಿಶ್ವಬ್ಯಾಂಕಿನವರ ಜೊತೆಯಲ್ಲಿ ಮಾತುಕತೆಗಳನ್ನು ನಡೆಸುತ್ತಾ ಇದ್ದೇವೆ. ಐದು ಸಾವಿರ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕೆಂಬ ನಮ್ಮ ಆಸೆ ಏನಿದೆ, ಮತ್ತು ನಮ್ಮ ಪ್ಲಾನ್ ಇದೆ. ಅದು ಬಹಳ ಮಹತ್ವಾಕಾಂಕ್ಷೆಯಿಂದ ಕೂಡರತಕ್ಕಂಥಾದ್ದು. ಆದ್ದರಿಂದ ಪ್ರಥಮವಾಗಿ ಎರಡು ಸಾವಿರ ಕೆರೆಗಳಿಂದ ಪ್ರಾರಂಭ ಮಾಡಿ ಎಂದು. ಅವರು ಕೌಂಟರ್ ಸಲಹೆಯನ್ನು ರಾಜ್ಯಸರ್ಕಾರಕ್ಕೆ ಮಾಡಿದ್ದಾರೆ. ಆದರೆ, ರಾಜ್ಯಸರ್ಕಾರದ ಆತುರ ಮತ್ತು ಹಾತುರ ಐದು ಸಾವಿರ ಕೆರೆಗಳನ್ನು ಪ್ರಾರಂಭ ಮಾಡಿ, ಈ ಕೆರೆಗಳನ್ನು ಕೇವಲ ಹೂಳೆತ್ತುವ ಕಾರ್ಯಕ್ರಮ ಎಂದು ನಾವು ಜಲಸಂವರ್ಧನೆಯ ಬೌಂಡರಿಯಲ್ಲಿ ಯೋಚನೆ ಮಾಡುತ್ತಾ ಇಲ್ಲ. ಇದು ಪೂರ್ಣಪ್ರಮಾಣದ ಆ ಕೆರೆಗಳ ಪುನರುಜ್ಜೀವನ ಮಾಡತಕ್ಕಂಥಾದ್ದು. ಅದಕ್ಕೆ ಯೂಸರ್ಸ್ ಸೊಸೈಟಿ ಮಾಡತಕ್ಕಂಥಾದ್ದು, ಅದರ ಮೇಲ್ವಿಚಾರಣೆಗೆ ಸೊಸೈಟಿಗಳು ಅಥವಾ ಯಾವ ಹೆಸರಿನಲ್ಲಿ ಬೇಕಾದರೂ ಕರೆಯಬಹುದು. ಅಸೋಸಿಯೇಷನ್, ಸೊಸೈಟಿ, ಅಥವಾ ಮತ್ತೆ ಯಾವುದಾದರೂ ಒಂದು. ಅವರು ನೇರ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಯೂಸ್ಡ್ ಚಾರ್ಜಸ್‌ನ್ನು ಪಡೆಯುವುದಕ್ಕೂ ಕೂಡ ಅವರಿಗೆ ಅಧಿಕಾರವನ್ನು ಕೊಡಬೇಕೆನ್ನುವಂಥಾದ್ದು ನಮ್ಮ ಈ ಯೋಜನೆಯ ಮೂಲ ಉದ್ದೇಶ.

ಆದ್ದರಿಂದ, ಎಲ್ಲಾದರೂ ಒಂದುಕಡೆ ಪ್ರಾರಂಭ ಮಾಡಬೇಕು. ಕೊನೆಗೆ ವಿಶ್ವಬ್ಯಾಂಕಿನವರು ಎರಡು ಸಾವಿರ ಕೆರೆಗಳಿಂದ ಪ್ರಾರಂಭ ಮಾಡಿ ಎಂದು ಹೇಳಿದ ಮೇಲೆ, ವಿಧಿ ಇಲ್ಲದೆ, ಅನಿವಾರ್ಯವಾಗಿ ನಾವು ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ. ಆದರೆ, ಬರಗಾಲ ಬಂದಿರತಕ್ಕ ಈ ಹೊತ್ತಿನಲ್ಲಿ, ಎರಡು ಸಾವಿರ ಕೆರೆಗಳನ್ನು ವಿಶ್ವಬ್ಯಾಂಕಿನವರು ಏನು ಮಾಡುತ್ತಿದ್ದಾರೆ. ಅದನ್ನು ಬಿಟ್ಟು ರಾಜ್ಯದಲ್ಲಿ ಒಟ್ಟು 745 ಹೋಬಳಿಗಳು ಇವೆ. ಈ 745 ಹೋಬಳಿಗಳಲ್ಲೂ ಒಂದೊಂದು ಕೆರೆಯನ್ನು ತೆಗೆದುಕೊಂಡು ಅದನ್ನು ಪೂರ್ಣಪ್ರಮಾಣದಲ್ಲಿ ಜೀರ್ಣೋದ್ಧಾರ ಮಾಡಬೇಕೆಂದು ಒಂದು ಆಲೋಚನೆ ಇದೆ. ಈ ಆಲೋಚನೆಗೆ ಚಾಲನೆಯನ್ನು ಕೊಡಬೇಕೆಂದು ಮಾನ್ಯ ಸಣ್ಣ ನೀರಾವರಿ ಸಚಿವರು ಮತ್ತು ಆ ಇಲಾಖೆಗೆ ಈಗಾಗಲೇ ಸೂಚನೆಯನ್ನು ಮಾಡಿದ್ದೇನೆ. ಇದನ್ನು ತ್ವರಿತಗತಿಯಿಂದ ಮಾಡುವುದಕ್ಕೆ ಈಗಾಗಲೇ ಎಸ್ಟಿಮೇಟ್ಸ್‌ನ್ನು ತಯಾರು ಮಾಡಿ ಎಂದು ಹೇಳಿದ್ದೆ. ಆ ಎಸ್ಟಿಮೇಟ್ಸ್‌ಗಳು ತಯಾರಾಗಿರಬಹುದು ಎಂದು ನಾನು ಭಾವನೆ ಮಾಡುತ್ತೇನೆ. ತಾವು ಹೇಳಿದಹಾಗೆ ಪಟ್ಟಣ ಪ್ರದೇಶಗಳಲ್ಲಿ, ಕೆರೆಗಳು ಏನು ಪುರಸಭೆಗಳಿಗೆ ಹತ್ತಿರ ಇವೆ, ಅಲ್ಲಿ ಹೂಳೆತ್ತುವ ಕಾರ್ಯಕ್ರಮದ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತೇನೆ. ಈ ಕೆಲಸಕ್ಕೆ ಆದ್ಯತೆಯ ಮೇಲೆ ಪ್ರತಿಯೊಂದು ಪಟ್ಟಣದಲ್ಲಿಯೂ ಕೂಡ, ಎಲ್ಲಿ ನೀರನ್ನು ಸರಬರಾಜು ಮಾಡುತ್ತಾರೆ, ಅಲ್ಲಿ ಈ ಕೆಲಸವನ್ನು ಮಾಡಬಹುದು ಎಂದು ನಾನು ಸೂಚನೆಯನ್ನು ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಸನ್ಮಾನ್ಯ ಅಧ್ಯಕ್ಷರೇ, ಈ ಕೆರೆಗಳ ಸಂರಕ್ಷಣೆ ಮಾಡುವಂಥಾದ್ದು ಮತ್ತು ಅಂತರ್ ಜಲವನ್ನು ಹೆಚ್ಚಿಸುವಂಥಾದ್ದು, ರಾಜ್ಯ ಸರ್ಕಾರ ಏನು ಕಾರ್ಯಕ್ರಮಹಾಕಿಕೊಂಡಿದೆ, ಅದು ಬಹಳ ಅಭಿನಂದನೆಯ ಕೆಲಸ. ಆದರೆ, ಅದು ಎಷ್ಟು ತೀವ್ರಗತಿಯಿಂದ ಆಗಬೇಕೋ, ಅಷ್ಟು ತೀವ್ರಗತಿಯಿಂದ ಆಗಬೇಕಾಗಿದೆ. ಇದು ಬಹಳ ಮಹತ್ವದ್ದು. ಏಕೆಂದರೆ, ಬೇರೆ ಬೇರೆ ನೀರಾವರಿ ಯೋಜನೆಗಳು ಅದು ಭಾರಿ ನೀರಾವರಿ ಯೋಜನೆ ಇರಬಹುದು, ಬೋರ್‌ವೆಲ್ಸ್ ಇರಬಹುದು ಇವೆಲ್ಲಾ ಯಾವ ಪ್ರಮಾಣದಲ್ಲಿ ಹೆಚ್ಚಿಗೆಯಾದವೋ, ಉದಾಹರಣೆಗೆ ಸಣ್ಣ ನೀರಾವರಿ ಯೋಜನೆಗಳು 1960-61ನೇ ಇಸವಿಯಲ್ಲಿ 2 ಲಕ್ಷ 36 ಸಾವಿರ ಹೆಕ್ಟೇರ್ ಪ್ರದೇಶದಲ್ಲಿದ್ದರೆ, 1996-97ಕ್ಕೆ 9 ಲಕ್ಷ 18 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಈ ನೀರಾವರಿ ಯೋಜನೆಗಳು ವಿಸ್ತಾರವಾಗಿವೆ. ಅದೇರೀತಿ ಬೋರ್‌ವೆಲ್ಸ್ 1960-61ರಲ್ಲಿ ಎಷ್ಟಿದ್ದವು ಎಂಬುದನ್ನು ಇಲ್ಲಿ ತೋರಿಸಿಲ್ಲ ಆಗಿನ ರೆಕಾರ್ಡ್ಸ್‌ನಲ್ಲಿ ಇಲ್ಲ. ಆದರೆ, 1996-97ನೇ ಇಸವಿಯೊಳಗೆ 3 ಲಕ್ಷ 67 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೋರ್‌ವೆಲ್ಸ್ ನಮ್ಮ ರಾಜ್ಯದಲ್ಲಿವೆ. ಹಾಗೆಯೇ ಓಪನ್ ವೆಲ್ಸ್ 1960-61ರಲ್ಲಿ ಒಂದು ಲಕ್ಷದ 33 ಸಾವಿರ ಇದ್ದವು. 1996-97ಕ್ಕೆ 4 ಲಕ್ಷ 60 ಸಾವಿರಕ್ಕೆ ಇಂಕ್ರೀಸ್ ಆಗಿವೆ. ಈ ಹೋಲಿಕೆಯನ್ನು ನೋಡಿದರೆ ಪ್ರತಿವರ್ಷ ಡಬಲ್, ತ್ರಿಬಲ್ ಆಗಿ ಇಂಕ್ರೀಸ್

ಆಗಿವೆ. ಆದರೆ, ಕೆರೆಗಳ ಪ್ರದೇಶ 1960-61ನೇ ಇಸವಿಯಲ್ಲಿ 3 ಲಕ್ಷ 44 ಸಾವಿರ ಹೆಕ್ಟೇರ್ ಇದ್ದವು. 1996-97ಕ್ಕೆ 2 ಲಕ್ಷ 40 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ಇಳಿಕೆಯಾಗಿದೆ. ಇದು ಬಹಳ ಗಂಭೀರವಾಗಿ ಚಿಂತನೆ ಮಾಡುವಂಥಾದ್ದು. ಎನ್‌ಕ್ರೋಚ್‌ಮೆಂಟ್ ಇರಬಹುದು, ಕ್ಯಾಚ್‌ಮೆಂಟ್ ಏರಿಯಾ ಕಡಿಮೆ ಇರಬಹುದು, ನೀರು ಬರುವಂಥಾದ್ದು ಇರಬಹುದು ಹೀಗೆ ಬೇರೆ ಬೇರೆ ಕಾರಣಗಳು ಇರಬಹುದು ಇವತ್ತು ಎರಡೂ ಕಡೆಯವರ ಜವಾಬ್ದಾರಿ ಇದೆ. ಆ ನಿರ್ವಹಣೆಯನ್ನು ಜನರೂ ಮಾಡಬೇಕಾಗುತ್ತದೆ, ಸಾರ್ವಜನಿಕರಲ್ಲಿ ಜಾಗೃತಿಯಯಾಗಿಬೇಕಾಗಿತ್ತು, ಅದೂ ಆಗಲಿಲ್ಲ. ಸರ್ಕಾರವೇ ಎಲ್ಲವನ್ನೂ ಮಾಡಲಿ ಎಂಬ ಭಾವನೆ ಬಂತು. ಹೀಗಾಗಿ, ಇವತ್ತು ಕೆರೆಗಳ ಪ್ರದೇಶ ಎನಿದೆ, ಅದು ಕಡಿಮೆಯಾಗುತ್ತಾ ಇದೆ. ಇದು ಬಹಳ ಮುಖ್ಯ. ಅದಕ್ಕಾಗಿ ಕೆರೆಗಳನ್ನು ಸಂರಕ್ಷಣೆ ಮಾಡಿದರೆ ಅದರಿಂದ ಅಂತರ್‌ಜಲ ಮಟ್ಟವೂ ಜಾಸ್ತಿಯಾಗುವುದಕ್ಕೆ ಸಾಧ್ಯವಿದೆ. ಅದರ ಮುಖಾಂತರ ಕಡಿಮೆ ಖರ್ಚಿನಲ್ಲಿ ಹೊಲಗಳಿಗೆ ನೀರಾವರಿ ಮಾಡುವುದಕ್ಕೂ ಸಾಧ್ಯವಿದೆ. ಇದಕ್ಕ ಬಹಳ ಪ್ರಾಮುಖ್ಯತೆ ಕೊಡಬೇಕು. ಇವತ್ತು ರಾಜ್ಯಸರ್ಕಾರ ಏನು ಪ್ರಾರಂಭ ಮಾಡಿದೆ, ಇದು ಅಷ್ಟಕ್ಕೇ ಸೀಮಿತವಾಗಬಾರದು. ಒಂದೆರಡು ವರ್ಷಗಳಲ್ಲಿ ಎಷ್ಟು ದೊಡ್ಡ ಪ್ರಮಾಣದಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುತ್ತೀರಿ ಅದು ಜನರಿಗೆ ಮತ್ತು ಸಮಾಜಕ್ಕೆ ಅನುಕೂಲವಾಗುತ್ತದೆಂಬುದನ್ನು ಹೇಳುತ್ತೇನೆ. ಇದರ ಬಗ್ಗೆ ಗಂಭೀರವಾದ ಚಿಂತನೆಯಾಗಲಿ ಎಂಬುದು ನನ್ನ ಸೂಚನೆ.

ಶ್ರೀ ಚಂದ್ರಕಾಂತ ಬೆಲ್ಲದ್ :— ತಾವೇನು ನಗರಸಭೆಗಳಲ್ಲಿ ಇರುವಂಥ ಕೆರೆಗಳಿಗೆ, ಈ ಕಾರ್ಯಕ್ರಮದ ಯೋಜನೆ ಮುಟ್ಟಬೇಕು ಎಂದು ಹೇಳಿದ್ದೀರಿ, ಅದು ಸೂಕ್ತವಾಗಿದೆ. ಏಕೆಂದರೆ, ನಗರಗಳಲ್ಲಿ ಸಾಕಷ್ಟು ಬೋರ್ ವೆಲ್‌ಗಳು ಬಂದಿವೆ. ಇವತ್ತು ಮಹಾನಗರದಲ್ಲೂ ಸಹಿತ ಸಾವಿರಾರು ಬೋರ್‌ವೆಲ್ಸ್ ಇವೆ. ಮಹಾನಗರದಲ್ಲೂ ಸಹಿತ ಸಾಕಷ್ಟು ದೊಡ್ಡ ದೊಡ್ಡ ಕೆರೆಗಳಲ್ಲಿ ಕ್ಯಾಚ್‌ಮೆಂಟ್ ಆಗಿ, ನೀರು ನಿಲ್ಲುವಂಥ ಪ್ರದೇಶವನ್ನೂ ನಾವು ಕಳೆದುಕೊಳ್ಳುತ್ತಾ ಇದ್ದೇವೆ. ಅದರ ಬಗ್ಗೆಯೂ ಸಹಿತ, ಎಲ್ಲೆಲ್ಲಿ ಸಾಧ್ಯವಿದೆ ಮಹಾನಗರಗಳಲ್ಲಿ, ಅಲ್ಲಿ ಈ ಯೋಜನೆ ಮಾಡಬೇಕು. ಪಟ್ಟಣಗಳಲ್ಲೂ ಸಹಿತ ಸಾವಿರಾರು ಬೋರ್‌ಗಳು ಇವೆ. ಇವುಗಳಿಗೆ ನೀರು ಬರಬೇಕಾದರೆ ನಾವು ಸಂಗ್ರಹಿಸಿದರೆ ಮಾತ್ರ, ಈ ಜಲಪಾತಗಳು ಹೆಚ್ಚಾಗುತ್ತವೆ ಮತ್ತು ಬೋರ್‌ಗಳಿಗೆ ನೀರು ಬರುತ್ತದೆ. ಅಂತಹ ಕೆರೆಗಳು ಮಹಾನಗರದಲ್ಲಿಯೂ ಇವೆ. ಕ್ಯಾಚ್‌ಮೆಂಟ್ ಏರಿಯಾದ ಜಾಗ ಎಷ್ಟೋ ಕಡಿಮೆಯಾಗುತ್ತಾ ಇವೆ. ನಾವು ಇದನ್ನೂ ಉಳಿಸಿಕೊಳ್ಳಬೇಕು ಮತ್ತು ನಗರದೊಳಗೆ ಮತ್ತು ನಗರದ ಸುತ್ತಮುತ್ತಲೂ ಮಹಾನಗರಸಭೆ ಇರಲಿ, ನಗರ ಸಭೆ ಇರಲಿ, ಪಂಚಾಯ್ತಿಗಳು ಇರಲಿ, ಆ ಬೋರ್‌ವೆಲ್‌ಗಳಿಗೆ ನೀರು ಸಿಗುವಂತೆ ಜಲಸಂವರ್ಧನೆ ಕೆಲಸ ಆಗಬೇಕು. ಸರ್ಕಾರದವರು ಈ ಕೆಲಸ ಏನು ಶುರು ಮಾಡಿದ್ದಾರೆ, ಇದಕ್ಕಾಗಿ ಮಾನ್ಯಮುಖ್ಯಮಂತ್ರಿಗಳವರಿಗೆ ಮೆಚ್ಚುಗೆಯನ್ನು ವ್ಯಕ್ತಮಾಡಬೇಕಾಗಿದೆ. ಇದು ಬಹಳ ಮಹತ್ವದ್ದು. ಇವತ್ತಿನದಿವಸ,

ಮೊದಲ ಆದ್ಯತೆ ಏನು ಸರ್ಕಾರ ಕೊಟ್ಟಿದೆ, ಇದಕ್ಕೆ ನಾವೆಲ್ಲರೂ ಮೆಚ್ಚುಗೆ ವ್ಯಕ್ತಮಾಡಬೇಕಾಗುತ್ತದೆ. ಇದು ಹೆಚ್ಚು ವ್ಯಾಪಕವಾಗಿ, ಪರಿಣಾಮಕಾರಿಯಾಗಿ ನಡೆದು ಜನರಿಗೆ ನೀರು ದೊರಕಬೇಕು. ಈ ಕೆರೆಗಳ ಸಂರಕ್ಷಣೆಯಾಗಬೇಕು. ಈ ಸಂಘಗಳು ಏನಿವೆ, ಉತ್ತಮವಾದ ಕಾರ್ಯವನ್ನು ಮಾಡುವಲ್ಲಿ ನಾವೆಲ್ಲರೂ ಪಾಲುದಾರರಾಗಬೇಕು.

11-00 ಎ.ಎಂ.

ಶ್ರೀ ಬಿ.ಆರ್. ಯಾವಗಲ್ :— ಬಯಲು ಪ್ರದೇಶದಲ್ಲಿ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಬಹಳ ಕಡಿಮೆ ಇರುತ್ತದೆ. ಅಲ್ಲಿರುವ ಕುಡಿಯುವ ನೀರಿನ ಕೆರೆಗಳು ಇರಬಹುದು, ಸಣ್ಣ ನೀರಾವರಿ ಕೆರೆಗಳು ಇರಬಹುದು ಇವುಗಳನ್ನು ಜಲಸಂವರ್ಧನೆ ಯೋಜನೆಯಲ್ಲಿ ಅಳವಡಿಸಿದ್ದರೂ ಹೊಸ ಕೆರೆಗಳನ್ನು ನಿರ್ಮಾಣ ಮಾಡಲು ಸ್ವಲ್ಪಮಟ್ಟಿನ ಪ್ರಾಶಸ್ತ್ಯ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸುತ್ತೇನೆ.

ಶ್ರೀ ಆರಗಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ಕೆಲವು ದಿವಸಗಳ ಹಿಂದೆ ಮಾಧ್ಯಮಗಳಲ್ಲಿ ಜಲಸಂವರ್ಧನೆ ಇಲಾಖೆಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಬೇರ್ಪಡಿಸಿ ಮುಖ್ಯಮಂತ್ರಿಗಳೇ ಅದನ್ನು ಇಟ್ಟುಕೊಂಡಿದ್ದಾರೆಂದು ಸುದ್ದಿ ಬಂದಿತ್ತು. ಆದರೆ ಜಲಸಂವರ್ಧನೆಯ ಬಗ್ಗೆ ಸಣ್ಣ ನೀರಾವರಿ ಸಚಿವರೇ ಬೆಳಿಗ್ಗೆಯಿಂದ ಉತ್ತರವನ್ನು ಕೊಡುತ್ತಿದ್ದಾರೆ. ಸಣ್ಣ ನೀರಾವರಿ ಸಚಿವರ ಖಾತೆಯಲ್ಲೇ ಜಲಸಂವರ್ಧನೆ ಇಲಾಖೆಯು ಇದೆಯೋ ಅಥವಾ ಅದನ್ನು ಬೇರೆ ಮಾಡಿ ಮುಖ್ಯಮಂತ್ರಿಗಳು ಹೊಂದಿದ್ದಾರೋ ಎಂಬ ಬಗ್ಗೆ ಸ್ಪಷ್ಟವಾಗಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಜಲಸಂವರ್ಧನೆ ಕಾರ್ಯಕ್ರಮವನ್ನು ಹೋಬಳಿಗೆ ಒಂದರಂತೆ ತೆಗೆದುಕೊಳ್ಳಬೇಕೆಂದು ಹೇಳಿದರು. ನಮ್ಮ ಉತ್ತರ ಕರ್ನಾಟಕದ ಭಾಗಗಳಲ್ಲಿ ಹೋಬಳಿಗಳ ಸಂಖ್ಯೆಯೇ ಕಡಿಮೆ ಇದೆ. ಉದಾಹರಣೆಗೆ, ನಮ್ಮ ಗದಗ್ ಮತ್ತು ಬೆಟಗೇರಿಗೆ ಹೋಬಳಿ ಇದೆ, ಇದರಿಂದಾಗಿ ಕೆಲವು ಹೋಬಳಿಗೆ ಕೆರೆಗಳೇ ಇಲ್ಲ. ಕೆಲವು ಹೋಬಳಿಗಳಲ್ಲಿ ಮಾತ್ರ ಕೆರೆಗಳು ಇದೆ. ಇಂದು ಬೆಳಿಗ್ಗೆ ಅಧಿಕಾರಿಯೊಬ್ಬರು ದೂರವಾಣಿ ಮಾಡಿ ಹೋಬಳಿಗೆ ಒಂದನ್ನು ಕೊಡುವಂತೆ ಕೇಳಿದರು. ಆದರೆ ನಮ್ಮಲ್ಲಿ ಹಲವಾರು ಕಡೆಗಳಲ್ಲಿ ಹೋಬಳಿಯಲ್ಲಿ ಒಂದೂ ಕೆರೆಯೂ ಇಲ್ಲ. ನನ್ನ ತಾಲ್ಲೂಕಿನಲ್ಲಿ ಒಂದೇ ಹೋಬಳಿಯಲ್ಲಿ ಆಷ್ಟೂ ಕೆರೆಗಳು ಇದೆ. ಆದ್ದರಿಂದ ನಮ್ಮಲ್ಲಿ ಒಂದೇ ಹೋಬಳಿಯಲ್ಲಿ ಎರಡು ಕೆರೆಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು.

ಶ್ರೀ ಕೆ.ಹೆಚ್. ಹನುಮೇಗೌಡ :— ಮಾನ್ಯ ಅಧ್ಯಕ್ಷರೆ, ಹಾಸನದ ಪಕ್ಕದಲ್ಲಿ

ಚನ್ನಪಟ್ಟಣವೆಂಬ ಊರಿದೆ, ಅಲ್ಲಿ ಮೊದಲು ಒಂದು ಕೆರೆ ಇತ್ತು, ಆರುನೂರು ವರ್ಷಗಳ ಹಿಂದೆ ಕಟ್ಟಿದ್ದ ಆ ಕೆರೆಯನ್ನು ಯಾವುದೋ ಕಾರಣಕ್ಕೆ ಒಡೆದುಬಿಟ್ಟರು. ಇದರಿಂದ ಹಾಸನ ನಗರದಲ್ಲಿದ್ದ ಅರ್ಧಭಾಗ ಬೋರ್‌ವೆಲ್‌ಗಳು ಬತ್ತಿಹೋದವು. ಐದಾರು ದೇವಸ್ಥಾನಗಳಿಗೆ ಪೂಜೆಗಾಗಿ ಓಪನ್ ಬಾವಿಯನ್ನು ತೋಡಿದ್ದರು. ನಾನು ಹೋಗಿ ನೋಡಿದ್ದೇನೆ. ಅವುಗಳು ಬತ್ತಿಹೋಗಿವೆ. ಇತ್ತೀಚೆಗೆ ಸಣ್ಣ ನೀರಾವರಿ ಸಚಿವರು ಹಾಸನಕ್ಕೆ ಬಂದಿದ್ದಾಗ ಇದನ್ನೆಲ್ಲಾ ತೋರಿಸಿದ್ದೆವು. ಜೊತೆಗೆ ಆ ಕೆರೆಯನ್ನೂ ತೋರಿಸಿದ್ದೆವು, ಆದನ್ನು ನೋಡಿ ಸಚಿವರು ಈ ಕೆರೆಯಲ್ಲಿ ನೀರು ನಿಲ್ಲುವಂತೆ ಮಾಡಿ ಈ ನಗರಕ್ಕೆ ನೀರು ಸರಬರಾಜಿನಲ್ಲಿ ತೊಂದರೆಯಾಗದಂತೆ ಮಾಡುತ್ತೇವೆಂದು ಹೇಳಿ ಬಂದಿದ್ದರು. ಆದರೆ ಇದುವರೆಗೆ ಯಾವುದೇ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಒಡೆದಿರುವ ಆ ಕೆರೆಯನ್ನು ಯಾವಾಗ ಮುಚ್ಚಿ ನೀರಿನ ಅನುಕೂಲ ಮಾಡಿಕೊಡುತ್ತೀರಾ ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಚೆನ್ನಿಗಪ್ಪ :— ಮಾನ್ಯ ಅಧ್ಯಕ್ಷರೆ, ಜಲಸಂವರ್ಧನೆ ಯೋಜನೆಯನ್ನೇನು ಸರ್ಕಾರ ಮಾಡಿದೆ ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಹಿಂದೆ ರಾಜಮಹಾರಾಜರು ಕುಡಿಯುವ ನೀರಿಗೆ, ಬೆಳೆ ಬೆಳೆಯಲು, ಪ್ರತಿಯೊಂದಕ್ಕೂ ಕೆರೆಗಳನ್ನು ಕಟ್ಟುವ ಕೆಲಸ ಮಾಡುತ್ತಿದ್ದರು. ಆದರೆ 1947 ರಿಂದ ಇಲ್ಲಿಯವರೆಗೆ ಕೆರೆಗಳಿಗೆ ಜನಸಂವರ್ಧನೆಯಂಥ ಕಾರ್ಯಕ್ರಮವನ್ನು ಯಾವುದೇ ಸರ್ಕಾರ ಮಾಡಿರಲಿಲ್ಲ. ಮಾನ್ಯ ಮುಖ್ಯಮಂತ್ರಿಯವರೇನು ಜಲಸಂವರ್ಧನೆ ಕಾರ್ಯಕ್ರಮವನ್ನು ಮಾಡಿ ರಾಜ್ಯದ ಮೂಲೆ ಮೂಲೆಗಳಲ್ಲಿರುವ ಹಳ್ಳಿಗಾಡಿನ ಕೆರೆಗಳ ಹೂಳನ್ನೆತ್ತುವ ಸಲುವಾಗಿ ಕೇವಲ ಐವತ್ತು ಕೆರೆಗಳನ್ನು ತೆಗೆದುಕೊಂಡಿರುತ್ತಾರೆ. ಹೋಬಳಿಗೆ ಒಂದೊಂದು ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದರ ಜೊತೆಗೆ ಸಣ್ಣ ಸಣ್ಣ ಕೆರೆಗಳನ್ನು ವಿಸ್ತಾರ ಮಾಡಿದರೆ ಆ ಕೆರೆಯ ಭಾಗದ ಜನರಿಗೆ, ಊರಿನವರಿಗೆ ಅನುಕೂಲವಾಗುತ್ತದೆ, ಇದನ್ನೂ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಸಿ. ಭೈರೇಗೌಡ :— ಮಾನ್ಯ ಅಧ್ಯಕ್ಷರೆ, ಜಲಸಂವರ್ಧನೆ ಯೋಜನೆಯಲ್ಲಿ ರೈತರ ಸಹಯೋಗದೊಂದಿಗೆ ಮಾಡಬೇಕು ಎಂಬುದು ಉದ್ದೇಶವಾಗಿದೆ. ಈ ಯೋಜನೆಗೆ ಒಳಪಡುವ ಕೆಲವು ಕಡೆಗಳಲ್ಲಿ ಟೆಂಡರ್‌ನ್ನು ಕರೆದಿದ್ದಾರೆ. ಕೆರೆಯಿಂದ ಒಂದು ಟ್ರ್ಯಾಕ್ಟರ್ ಲೋಡ್ ಮಣ್ಣನ್ನು ತೆಗೆಯಬೇಕಾಗಿದ್ದರೆ 22ರಿಂದ 23 ರೂಪಾಯಿ ಖರ್ಚಾಗುತ್ತದೆ. ಆದರೆ ಕೆಲವು ಕಡೆ 120 ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಹಣದ ದುಂದುವೆಚ್ಚವಾಗುತ್ತಿರುವ ಬಗ್ಗೆ ಮುಖ್ಯಮಂತ್ರಿಯವರ ಗಮನಕ್ಕೆ ಅನೇಕ ಸಲ ತಂದಿದ್ದೇನೆ. ಬಹಳ ಶ್ರದ್ಧೆ ವಹಿಸಿ ಇದನ್ನು ಮಾಡಿರುವವರಲ್ಲಿ ನಾನೂ ಒಬ್ಬ. ಇದರ ಬಗ್ಗೆ ಚರ್ಚೆ ಮಾಡಲು ಒಂದು ಸಭೆ ಕರೆಯಬೇಕೆಂದು ಕೇಳುತ್ತಿದ್ದರೂ ಕಳೆದ ಒಂದೂವರೆ ವರ್ಷದಿಂದ

ಇದಕ್ಕೆ ಅವಕಾಶವನ್ನು ಕೊಡಲಿಲ್ಲ. ಈ ರೀತಿ ದುಂದುವೆಚ್ಚ ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ? ಅಲ್ಲಿ ಉಪಯೋಗಿಸುವ ಯಂತ್ರಗಳಿಗೆ ಗಂಟೆಯ ಆಧಾರದ ಮೇಲೆ ಬಾಡಿಗೆಯನ್ನು ಕೊಟ್ಟರೆ ಸಾಕು. ಆದರೆ ಇವರು ಸಾಗಾಣಿಕೆಗೂ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಇದರಿಂದ ದುಂದುವೆಚ್ಚವಾಗುತ್ತಿದೆ, ಇದನ್ನು ನಿಲ್ಲಿಸುವ ಕೆಲಸವನ್ನು ಸರ್ಕಾರದವರು ಮಾಡಬೇಕು. ಕಡಿಮೆ ವೆಚ್ಚದಲ್ಲಿ ಹೆಚ್ಚು ಕೆಲಸವಾಗುವಲ್ಲಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ :— ಮಾನ್ಯ ಅಧ್ಯಕ್ಷರೆ, ಜಲಸಂವರ್ಧನೆ ಮಾಡುವ ಮೂಲಕ ಭೂಮಿಯಲ್ಲಿ ನೀರು ಸಂಗ್ರಹ ಮಾಡುವ ಕಾರ್ಯಕ್ರಮವೇನಿದೆ ಅದು ಒಳ್ಳೆಯದು. ರಾಜ್ಯದಲ್ಲಿರುವ ಎಲ್ಲಾ ತಾಲ್ಲೂಕುಗಳಲ್ಲಿ ಐವತ್ತು ಅರವತ್ತು ವರ್ಷಗಳ ಹಿಂದಿನ ಕೆರೆಗಳೆಲ್ಲಾ ಒಡೆದುಹೋಗಿ ಖಾಸಗಿಯವರ ವಶದಲ್ಲಿದೆ. ಆದರೆ ಕಂದಾಯದ ದಾಖಲೆಯಾದ ಆರ್.ಟಿ.ಸಿ.ಯಲ್ಲಿ ಕೆರೆಯ ಹೆಸರು, ಎಷ್ಟು ಎಕರೆ ಇದೆ ಎಂಬ ಬಗ್ಗೆ ಮಾಹಿತಿ ಇದೆ. ಆದ್ದರಿಂದ ಜಲಸಂವರ್ಧನೆ ಕಾರ್ಯಕ್ರಮದಲ್ಲಿ ಇಂಥ ಒಡೆದುಹೋದ ಕೆರೆಗಳನ್ನು ಪುನಶ್ಚೇತನಗೊಳಿಸಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ ಮತ್ತು ಜಲಸಂವರ್ಧನ ನೀತಿಗೆ ಆಧಾರವಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸುತ್ತಿದ್ದೇನೆ.

ಶ್ರೀ ಸಿ. ಗುರುಸ್ವಾಮಿ :— ಮಾನ್ಯ ಅಧ್ಯಕ್ಷರೆ, ಜಲಸಂವರ್ಧನೆ ಕಾರ್ಯಕ್ರಮದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ವಿವರಣೆ ಕೊಟ್ಟಿದ್ದಕ್ಕೆ ಧನ್ಯವಾದಗಳು. ವಿಶ್ವಬ್ಯಾಂಕ್‌ನ ಆದೇಶದ ಪ್ರಕಾರ ರಾಜ್ಯದ ಎರಡು ಸಾವಿರ ಕೆರೆಗಳನ್ನು ತೆಗೆದುಕೊಳ್ಳುತ್ತಿದ್ದೀರಿ. ಹಿಂದುಳಿದ ಜಿಲ್ಲೆಗಳಲ್ಲಿ ಅದರಲ್ಲೂ ನೀರಾವರಿ ಇಲ್ಲದಿರುವ ಜಿಲ್ಲೆಗಳಲ್ಲಿ ಕೆರೆಗಳ ಹೂಳು ಎತ್ತುವುದು, ದುರಸ್ತಿ ಮಾಡುವುದು ಬಹಳ ಅತ್ಯಾವಶ್ಯಕವಾಗಿ ಆಗಬೇಕಾಗಿದೆ. ಜನರು ಸಂಕಷ್ಟದಲ್ಲಿದ್ದಾರೆ. ಆದ್ದರಿಂದ ತಾವೇನು ಎರಡು ಸಾವಿರ ಕೆರೆಗಳನ್ನು ತೆಗೆದುಕೊಳ್ಳುತ್ತಿದ್ದೀರಿ ಅದರಲ್ಲಿ ಹಿಂದುಳಿದ ಹೊಸ ಜಿಲ್ಲೆಗಳಲ್ಲಿನ ಕೆರೆಗಳಿಗೆ ಆಧ್ಯತೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಟೆಂಡರ್ ಮೂಲಕ ಇದನ್ನು ಮಾಡುವುದಕ್ಕಿಂತ ಬರಗಾಲ ಬಂದು ರೈತರು ಸಂಕಷ್ಟದಲ್ಲಿರುವಾಗ ಅವರಿಗೇ ಕೂಲಿ ಇಲ್ಲವೆ ಹಾಳು ಕೊಟ್ಟು ಮಾಡಿಸತಕ್ಕ ಪ್ರಯತ್ನ ಮಾಡುತ್ತೀರೆಂದು ನಂಬಿರುತ್ತೇನೆ.

ಶ್ರೀ ಬಿ.ಎಸ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ನಮ್ಮ ಕಾಲದಲ್ಲಿ ಗಂಟಿಗಳ ಲೆಕ್ಕದಲ್ಲಿ ಮಣ್ಣನ್ನು ತೆಗೆಯುವ ಪದ್ಧತಿ ಇತ್ತು, ಆದರೆ ಈಗ ಮೀಟರ್ ಲೆಕ್ಕದಲ್ಲಿ ಕೊಟ್ಟರೆ ಅದರಲ್ಲಿ ಗೋಲ್‌ಮಾಲ್ ಆಗುತ್ತದೆ. ಹೆಚ್ಚು ತೋರಿಸಲು ಕೆಲಸವಾಗುತ್ತದೆ. ಅದು ಆಗಲಾರದು.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ಸಚಿವರು) :--- ಮಾನ್ಯ ಅಧ್ಯಕ್ಷರೆ, ಮಾನ್ಯ ಗುರುಸ್ವಾಮಿಯವರು ಹೇಳಿರುವ ಅಭಿಪ್ರಾಯದಂತೆ ನಾವು ಈಗಾಗಲೇ ಹೋಬಳಿ ಕೆರೆಗಳ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಹಮ್ಮಿಕೊಂಡಿದ್ದೇವೆ. ಸಂಪೂರ್ಣವಾಗಿ ನಮ್ಮ ಜನರ ಕೈಯಿಂದ ಮಾಡಿಸತಕ್ಕದ್ದು. ಬರಪರಿಸ್ಥಿತಿಯಲ್ಲಿ ಆ ರೀತಿ ಮಾಡಬೇಕೆಂಬ ಆದೇಶವನ್ನು ಮಾನ್ಯ ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ಆ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದೇವೆ. ಮಾನ್ಯ ಎಸ್.ಎಸ್. ಪಾಟೀಲರು ಒಂದು ವೇಳೆ ಹೋಬಳಿಯಲ್ಲಿ ಕೆರೆಗಳು ಇಲ್ಲದಿದ್ದರೆ ಕೆರೆಗಳು ಇರುವ ಮತ್ತೊಂದು ಹೋಬಳಿಯ ಎರಡು ಕೆರೆಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದನ್ನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳುತ್ತೇನೆ. ಮಾನ್ಯ ಯಾವಗಲ್‌ರವರು ಹೊಸ ಕೆರೆ ಮಾಡುವ ಬಗ್ಗೆ ಹೇಳಿದ್ದಾರೆ. ಅವರು ಹೊಸ ಕೆರೆ ಮಾಡುವ ಬಗ್ಗೆ ಜಾಗವನ್ನು ತೋರಿಸಿದರೆ ಖಂಡಿತವಾಗಿ ಮಾಡುತ್ತೇವೆ. ಮಾನ್ಯ ಬೆಲ್ಲದ್‌ರವರು ಪಟ್ಟಣ ಪ್ರದೇಶದ ಕೆರೆಗಳ ಪುನಶ್ಚೇತನದ ಬಗ್ಗೆ ಹೇಳಿದ್ದಾರೆ. ನಾವು ಈಗಾಗಲಿ ಎಲ್ಲಾ ಮುನಿಸಿಪಾಲಿಟಿ, ನಗರಪಾಲಿಕೆಗಳಿಗೂ ಪತ್ರವನ್ನು ಬರೆದು ಯಾವ್ಯಾವ ಕೆರೆಗಳಿಗೆ ಒಳಚರಂಡಿ ವ್ಯವಸ್ಥೆಯನ್ನು ಅಳವಡಿಸಿದ್ದೀರಿ ಅದನ್ನು ಸಂಪೂರ್ಣವಾಗಿ ತಪ್ಪಿಸಬೇಕೆಂದು ತಿಳಿಸಿದ್ದೇವೆ. ಈಗಾಗಲೇ ಬೆಳಗಾಂನ ಕಿಲಾವಿ ಕೆರೆಗೆ ಅದನ್ನು ಸಂಪೂರ್ಣವಾಗಿ ತಪ್ಪಿಸಿಯಾಗಿದೆ. ಯಾವುದೇ ಒಳಚರಂಡಿ ನೀರು ಕೆರೆಗಳಿಗೆ ಹೋಗಬಾರದು. ಆದ್ದರಿಂದಲೇ ಕೆರೆಗಳು ಸಂಪೂರ್ಣವಾಗಿ ಹಾಳಾಗುತ್ತದೆ. ಕೆಲವು ಮುನಿಸಿಪಾಲಿಟಿಯವರು ಹಣದ ವ್ಯವಸ್ಥೆಯನ್ನು ಮಾಡಲೂ ಮುಂದೆ ಬಂದಿದ್ದಾರೆ. ಉದಾಹರಣೆಗೆ, ಬೆಂಗಳೂರಿನ ಯಡಿಯೂರು ಕೆರೆಗೆ ಮಹಾನಗರ ಪಾಲಿಕೆಯಿಂದ ಸ್ವಲ್ಪ ಹಣಕಾಸಿನ ಸಹಾಯ ನೀಡುವುದಾಗಿ ತಿಳಿಸಿದ್ದಾರೆ. ಆ ರೀತಿ ಎಲ್ಲಾ ಮುನಿಸಿಪಾಲಿಟಿ, ಕಾರ್ಪೋರೇಷನ್‌ರವರು, ನಾಗರೀಕರು ಹಣಕಾಸಿನ ನೆರವು ನೀಡಲು ಸ್ವಲ್ಪ ಮುಂದೆ ಬಂದರೆ ಈ ಕಾರ್ಯಕ್ರಮವನ್ನು ತಕ್ಷಣವೇ ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಹಣಕಾಸಿನ ಲಭ್ಯತೆ ಅಷ್ಟೊಂದು ಪ್ರಮಾಣದಲ್ಲಿ ಇರುವುದಿಲ್ಲ. ಗ್ರಾಮೀಣ ಪ್ರದೇಶಗಳಿಗೆ ಒತ್ತು ಕೊಡುವ ನೀತಿ ಇರುವುದರಿಂದ ಇದನ್ನು ತಕ್ಷಣವೇ ಹಮ್ಮಿಕೊಳ್ಳುತ್ತೇವೆ. ಸ್ವಲ್ಪ ಹಣಕಾಸಿನ ನೆರವಿನಿಂದ ಪಟ್ಟಣ ಪ್ರದೇಶದ ಕೆರೆಗಳು ಅಚ್ಚುಕಟ್ಟಾಗುವುದಿಲ್ಲ. ಆದ್ದರಿಂದ ಪಟ್ಟಣ ಪ್ರದೇಶದ ನಾಗರೀಕ ಬಂಧುಗಳಿಂದ, ಮುನಿಸಿಪಾಲಿಟಿಗಳಿಂದ ಹಣಕಾಸಿನ ಸಹಕಾರ ಬರಬೇಕು. ಯಾವುದಾದರೂ ರೂಪದಲ್ಲಿ ನಮಗೆ ಹಣಕಾಸು ಲಭ್ಯವಾದರೆ ಬಹಳ ಉತ್ತಮವಾದ ಕಾರ್ಯಕ್ರಮ ಹೊರಹೊಮ್ಮುತ್ತದೆ. ಮಾನ್ಯ ಚೆನ್ನಿಗಪ್ಪನವರು ಟ್ಯಾಂಕ್ ಪಂಚಾಯಿತಿ ಎಂದು ರಾಜಮಹಾರಾಜರ ಕಾಲದಲ್ಲಿತ್ತು ಎಂದು ಹೇಳಿದರು. 1911ರಲ್ಲೇ ಟ್ಯಾಂಕ್ ಪಂಚಾಯಿತಿ ಎಂದು ಮಾಡಲಾಗಿತ್ತು. ಅದರ ಆಧಾರದ ಮೇಲೆ ಇವತ್ತಿಗೂ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಈಗೊಂದು ಅಸೋಸಿಯೇಷನ್, ಸೊಸೈಟಿ ಎಂದು ನಾವೇನು ಮಾಡುತ್ತಿದ್ದೇವೆ. ಅದೇರೀತಿ ಇವತ್ತಿಗೂ

ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದ್ದೇವೆ. ಎನ್‌ಕ್ರೋಚ್‌ಮೆಂಟ್ ಬಗ್ಗೆ ಕೃಷ್ಣಮೂರ್ತಿಗಳು ಪ್ರಸ್ತಾಪಿಸಿದರು. ಎನ್‌ಕ್ರೋಚ್‌ಮೆಂಟ್ ಬಗ್ಗೆ ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಗಳು ಡೈರೆಕ್ಷನ್ ಕೊಟ್ಟಿದ್ದಾರೆ ಮೊದಲು ಸರ್ವೆ ಕಾರ್ಯ ಮಾಡಿ ಮುಗಿದ ಮೇಲೆಯೇ ಕೆರೆ ಹೂಳೆತ್ತುವ ಕೆಲಸ ಮಾಡಬೇಕೆಂದು. ಈಗಾಗಲೇ ಹೋಬಳಿಗೊಂದು ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ, ಅದು ಎನ್‌ಕ್ರೋಚ್‌ಮೆಂಟಿರಬಹುದು ಸಮಗ್ರ ಅಭಿವೃದ್ಧಿ ಇರಬಹುದು. ಎಲ್ಲಾ ನಿಟ್ಟಿನಲ್ಲೂ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಹಬ್ಬಿ ಜಲಪಾತದಿಂದ ನೀರು ಒದಗಿಸುವ ಯೋಜನೆ.

257(2207) ಶ್ರೀ ಮಲ್ಲಿಕಾರ್ಜುನ ಕೆ.ಬಿ. (ಬೀರೂರು) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹಬ್ಬಿ ಜಲಪಾತದಿಂದ ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಬೀರೂರು ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮದಗದ ಕೆರೆ ಮತ್ತು ಹಿರಿಯೂರು ವಾಣಿವಿಲಾಸ (ಮಾರಿ ಕಣಿವೆ) ಸಾಗರಕ್ಕೆ ನೀರು ಒದಗಿಸುವ ಯೋಜನೆ ಸರ್ಕಾರದ ಮುಂದೆ ಇದೆಯೆ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಯಾವುದಾದರೂ ಸಮೀಕ್ಷೆ ನಡೆಸಲಾಗಿದೆಯೆ; ನಡೆಸಿದ್ದರೆ ಸಮೀಕ್ಷೆ ವರದಿ ಸರ್ಕಾರದ ಕೈ ಸೇರಿದೆಯೇ ಸೇರಿದ್ದಲ್ಲಿ, ಸದರಿ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

1) ಹಬ್ಬಿ ಜಲಪಾತದಿಂದ ಮದಗದ ಕೆರೆಗೆ ನೀರು ಒದಗಿಸುವ ಪ್ರಸ್ತಾಪ ತನಿಖೆಯಲ್ಲಿದೆ.

2) ಭದ್ರಾ ಜಲಾಶಯದಿಂದ ವಾಣಿವಿಲಾಸ ಸಾಗರಕ್ಕೆ ನೀರು ಒದಗಿಸುವ ಪ್ರಸ್ತಾಪ ತನಿಖೆಯಲ್ಲಿದೆ.

ಅ) ಹಬ್ಬಿ ಜಲಪಾತ-ಮದಗದಕೆರೆ ಲಿಂಕ್ ಕಾಲುವೆಗಾಗಿ ಈಗ ಟೋಪೋಷೀಟ್ ಆಧಾರಿತ ಅಧ್ಯಯನ ಮಾಡಲಾಗುತ್ತಿದೆ. ಭದ್ರಾ ಜಲಾಶಯ- ವಾಣಿವಿಲಾಸ ಸಾಗರ ಲಿಂಕ್ ಕಾಲುವೆಗಾಗಿ ಸವಿವರ ಸರ್ವೆ ಮತ್ತು ತನಿಖಾ ಕಾರ್ಯಗಳು ಪ್ರಗತಿಯಲ್ಲಿವೆ. ಯೋಜನಾ ವರದಿಗಳನ್ನು ತಯಾರಿಸಿ ಅವುಗಳಿಗೆ ತಾಂತ್ರಿಕ ಸಲಹಾ ಸಮಿತಿಯಿಂದ ಅನುಮೋದನೆಯನ್ನು ಪಡೆದ ನಂತರ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ ಕಾಮಗಾರಿಗಳನ್ನು ಆರಂಭಿಸಲಾಗುವುದು.